Sri A.K. Ananthkrishna :- I am not shouting. I am on a point of Order. Speaker has allowed me. The point is very simple. You have given a ruling. Inspite of your having given the decision earlier, yet, you have allowed further discussion on the matter. We waited for it. Finally you have given your Ruling. The Bill has been introduced and they walked out of the House. I only request you to kindly ensure that no further discussion of the very subject matter is taken up. That's all.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

(1) ಆಶ್ರಯ ಯೋಜನೆಯಡಿಯಲ್ಲಿ ನಡೆದ ಅವ್ಯವಹಾರಕ್ಕೆ ಸಿ.ಓ.ಡಿ ವರದಿ ಹಾಗೂ ಗೃಹ ಮಂಡಳಿಯ ಅವ್ಯವಹಾರಕ್ಕೆ ತನಿಖೆಗೆ ಒತ್ತಾಯ.

ಶ್ರೀ ಆರ್. ವಿ. ದೇಶಪಾಂಡೆ :- ಈಗ ಯಾರು ಮಾತನಾಡುತ್ತಿದ್ದಾರೆ ? ಮಾನ್ಯ ಅನಂತ ಕೃಷ್ಣರವರಿಗೆ ಏನೋ ಮಾತನಾಡಬೇಕು, ಎಂದು ಅಂತ ಹೇಳಿ ಮಾತನಾಡುತ್ತಿದ್ದಾರೆ. ಅವರು ಸೀನಿಯರ್ ಮೆಂಬರ್ ಇದ್ದಾರೆ. ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಇದ್ದಿಲ್ಲ. ನಾವು ಇವತ 2-3 ವಿಷಯಗಳನ್ನು ಪ್ರಸ್ತಾಪ ಮಾಡಿದೆವು. ಒಂದು ಸಿ.ಓ.ಡಿ ಯವರು ಏನು ಒಂದು ವಿಷಯದ ಬಗ್ಗೆ ಎನ್‌ಕ್ವಯರಿ ಮಾಡುತ್ತಿದ್ದಾರೆ. ಅವರಿಂದ ಒಂದು ಇಂಟೀರಿಯಮ್ ರಿಪೋರ್ಟ್ ಸರ್ಕಾರಕ್ಕೆ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಂಟೀರಿಯಮ್ ರಿಪೋರ್ಟ್ ಏನಿದೆ, ಏನಾಗಿದೆ ಅದನ್ನು ಹೇಳಬೇಕಾಗುತ್ತದೆಂದು ಒತ್ತಾಯ ಮಾಡುತ್ತಿದ್ದೇವೆ. ಈ ಮನೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಏನು ನಡೆದಿದೆ, ಆ ವಿಷಯಗಳೆಲ್ಲ ಪತ್ರಿಕೆಗಳಲ್ಲಿ ಬಂದಿದೆ. ಚೀಫ್ ಇಂಜಿನಿಯರವರನ್ನು ಅರೆಸ್ಟ್ ಮಾಡಿದ್ದೇವೆ. ಎಕ್ಸಿಕ್ಯೂಟೀವ್ ಇಂಜಿನಿಯರನ್ನು ಅರೆಸ್ಟ್ ಮಾಡಿದ್ದೇವೆ. ಮತ್ತೊಂದು ಮಾಡಿದ್ದೇವೆ. ಇಂಥವರು ಹಣವನ್ನು ಕೊಟ್ಟಿದ್ದಾರೆಂದು ಪೇಪರ್‌ನಲ್ಲಿ ಬಂದಿದೆ. ಅದರ ಬಗ್ಗೆ ತಾವು ಏನು ಮಾಡಿದಿರಿ ? ಸರ್ಕಾರದವರು ಏನು ಕ್ರಮ ತೆಗೆದುಕೊಂಡಿರುತ್ತಾರೆ? ಯಾರಿಗೆ ಅರೆಸ್ಟ್ ಮಾಡಿದರು ? ಯಾರನ್ನು ಸಸ್‌ಪೆಂಡ್ ಮಾಡಿದರು ? ಮುಂದೆ ಏನು ನಡೆಯುತ್ತಿದೆ ಅದನ್ನು ಅವರು ಹೇಳಬೇಕಾಗುತ್ತದೆ. ಅದರ ಸಲುವಾಗಿ ಮಾನ್ಯ ಮುಖ್ಯ ಮಂತ್ರಿಗಳು ವಿವರವಾಗಿ ಸ್ಟೇಟ್ ಮೆಂಟ್ ಕೊಡಬೇಕು. ಮತ್ತು ಆ ಪ್ರಿಲಿಮನರಿ ರಿಪೋರ್ಟ್‌ನಲ್ಲಿ ಏನು ಬಂದಿದೆ ಅದನ್ನು ಸಹ ಸಭೆಯ ಮುಂದೆ ಇಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್ ಯಡಿಯೂರಪ್ಪ (ಶಿಕಾರಿ ಪುರ) :- ಮಾನ್ಯ ಅಧ್ಯಕ್ಷರೇ, ಸಿಓಡಿಯವರು ಇಂಟೀರಿಯಮ್ ರಿಪೋರ್ಟ್ ಕೊಟ್ಟಿದ್ದಾರೆ. ನಿನ್ನೆ ಇಡೀ ದಿವಸ ನಾವು ಧರಣಿ ಕುಳಿತಿದ್ದೇವೆ. ಆಶ್ರಯ ಯೋಜನೆಯ ಅಡಿಯಲ್ಲಿ ಏನು ಸಿಓಡಿ ಇಂಟೀರಿಯಮ್ ರಿಪೋರ್ಟ್ ತಮಗೆ ಕೊಟ್ಟಿದ್ದಾರೆ. ಅದನ್ನು ಹೌಸ್‌ನಲ್ಲಿ ಟೇಬಲ್ ಮಾಡಬೇಕು. ಅನೇಕ ವಿಷಯಗಳನ್ನು ಬಯಲು ಮಾಡಿದ್ದಾರೆ. ಇಡೀ ರಾಜ್ಯದ ಜನತೆ ಈ ಕಡೆ ನೋಡುತ್ತಿರುವಾಗ, ಕಡು ಬಡವರಿಗೆ ಮನೆ ಕೊಡುವ ವಿಷಯದಲ್ಲಿ ಅನ್ಯಾಯವಾಗಿದೆ. ಕೆಲವರನ್ನು ಅರೆಸ್ಟ್ ಮಾಡಿದ್ದಾರೆ. ನಾವು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಸಿಓಡಿಯಿಂದ ವರದಿಯನ್ನು ತರಿಸಿದ್ದೀರಿ ತಪಿತಸ್ಥರಿಗೆ ಶಿಕ್ಷೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೀರಿ. ಅನೇಕ ಅಧಿಕಾರಿಗಳನ್ನು ಬಂಧಿಸಿದ್ದೀರಿ. ನಾವು ಶ್ಲಾಘನೆ ಮಾಡುತ್ತೇವೆ. ನಿಮ್ಮ ಉದ್ದೇಶ ಏನಿದೆ ಅದನ್ನು ನಾವು ಮೆಚ್ಚುತ್ತೇವೆ. ಈವೊಂದು ಅವ್ಯವಹಾರದ ಹಿನ್ನೆಲೆಯಲ್ಲಿ ಗೃಹ ಮಂಡಳಿಯ ಅಧ್ಯಕ್ಷರನ್ನು ಏನು ನೇಮಕ ಮಾಡಿದ್ದೀರಿ ಆವೊತ್ತಿನಿಂದ ಇವತ್ತಿನವರೆಗೆ ನಡೆದಿರುವ ವ್ಯವಹಾರಗಳ ಬಗ್ಗೆ ನನ್ನ ಹತ್ತಿರ ಅನೇಕ ದಾಖಲೆಗಳಿವೆ. ಸಂಪೂರ್ಣವಾಗಿ ಅದರ ಬಗ್ಗೆ ಸಿಓಡಿ ತನಿಖೆ ಮಾಡಿಸಬೇಕೆನ್ನುವುದು ನಮ್ಮದು ಆಗ್ರಹವಿದೆ. ಅದಕ್ಕೋಸ್ಕರ ಸಿಓಡಿ ಇಂಟೀರಿಯಮ್ ವರದಿಯಲ್ಲಿ

ಆ ಕಂಟ್ರಾಕ್ಟ್‌ರವರ ಮೇಲೆ ಮಾಡಿರತಕ್ಕ ಆಪಾದನೆಗಳಿಗೆ ಸಂಬಂಧಪಟ್ಟ ಹಾಗೆ ನನ್ನ ಹತ್ತಿರ ದಾಖಲೆಗಳಿವೆ. ಅದಕ್ಕೋಸ್ಕರ ಗೃಹ ಮಂಡಳಿಯ ಎಲ್ಲಾ ವ್ಯವಹಾರಗಳ ಬಗ್ಗೆ ಸರ್ಕಾರ ಸಿಓಡಿ ತನಿಖೆ ಮಾಡಿಸಿ ವರದಿ ತರಿಸಬೇಕು. ಈ ಸಂದರ್ಭದಲ್ಲಿ ಈಗಾಗಲೇ ಕೊಟ್ಟಿರುವ ಇಂಟೇರಿಯಮ್ ವರದಿಯನ್ನು ಟೇಬಲ್ ಮಾಡಿದರೆ ಅನೇಕ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ ಹಾಗೆ ಆಗುತ್ತದೆ. ಅನೇಕ ಅವ್ಯವಹಾರಗಳನ್ನು ತಪ್ಪಿಸಿದಂತಾಗುತ್ತದೆ. ಮನೆಗಳನ್ನು ಅಲಾಟ್ ಮಾಡುವ ಸಂದರ್ಭದಲ್ಲಿ, ಸೈಟುಗಳನ್ನು ಅಲಾಟ್ ಮಾಡುವ ಸಂದರ್ಭದಲ್ಲಿ ಸುಮಾರು ನೂರಾರು ಕೋಟಿ ರೂಪಾಯಿಗಳ ದುರ್ವ್ಯವಹಾರ ಆಗಿರುವ ದಾಖಲೆಗಳು ನನ್ನ ಹತ್ತಿರ ಇವೆ. ಯಾವ ಕಂಟ್ರಾಕ್ಟರಿಗೆ ಟೆಂಡರ್‌ನಲ್ಲಿ ಅವಕಾಶ ಇರಲಿಲ್ಲವೋ ಅಂತಹವರನ್ನು ಕರೆಯಿಸಿ ಹಿಂಬಾಗಿಲಿನಿಂದ ಅವರಿಗೆ ಕೆಲಸ ಕೊಟ್ಟಿದ್ದಾರೆ. ಕಾನೂನು ಬಾಹಿರವಾಗಿ ಬೋರ್ಡ್ ರೆಸುಲ್ಯೂಷನ್ ಪಾಸ್ ಮಾಡದೆ ಅಲ್ಲಿರುವ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಸೇರಿಕೊಂಡು ದುಡ್ಡು ಕೊಟ್ಟಿರತಕ್ಕ ಅನೇಕ ಅವ್ಯವಹಾರ ನಡೆದಿರುವುದರಿಂದ ಆ ಗೃಹ ಮಂಡಳಿಯ ಸಂಪೂರ್ಣ ವ್ಯವಹಾರವನ್ನು ತನಿಖೆ ಮಾಡಬೇಕಾಗಿದೆ. ಇವುತ್ತು ಯಾರೋ ಒಬ್ಬ ಅಧಿಕಾರಿಯನ್ನು ಬಂಧಿಸಿದರೆ ಆಗುವುದಿಲ್ಲ. ಅಧ್ಯಕ್ಷರು ಯಾರು ಇದ್ದಾರೆ ಅವರು ಪೂರ್ಣ ಜವಾಬ್ದಾರರು ಇದ್ದಾರೆ. ಗೃಹ ಮಂಡಳಿಯ ಅಧ್ಯಕ್ಷರನ್ನು ಬಂಧನ ಮಾಡಬೇಕಾಗಿತ್ತು. ಅಧ್ಯಕ್ಷರು ಪಾಲ್ಗೊಂಡಿರತಕ್ಕ ದಾಖಲೆಗಳು ನನ್ನ ಹತ್ತಿರ ಇವೆ. ಅಧ್ಯಕ್ಷರು ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಅವರನ್ನು ತಕ್ಷಣ ಬಂಧಿಸಬೇಕು. ನೂರಾರು ಕೋಟಿ ರೂಪಾಯಿಗಳ ಅವ್ಯವಹಾರ ಮಾಡಿರತಕ್ಕ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಸಿಓಡಿ ಇಂಟೇರಿಯಮ್ ರಿಪೋರ್ಟ್ ಏನಿದೆ ಅದನ್ನು ಟೇಬಲ್ ಮಾಡಿ. ಗೃಹ ಮಂಡಳಿಯ ಅಧ್ಯಕ್ಷರು ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಕಾನೂನು ಬಾಹಿರ ಕೆಲಸ ಮಾಡಿದ್ದಾರೆ ಅವರು.

ಶ್ರೀ ಎ. ಕೆ.ಅನಂತಕೃಷ್ಣ :- ನೀವು ಹೇಳಿದ ಹಾಗೆ ಮಾಡಬೇಕೇ ?

ಅಧ್ಯಕ್ಷರು :- ತಾವು ಕುಳಿತುಕೊಳ್ಳಿ

ಶ್ರೀ ಬಿ. ಎಸ್. ಯಡಿಯೂರಪ್ಪ : - ಅವರು ಈ ವ್ಯವಹಾರದಲ್ಲಿ ಪಾಲ್ಗೊಂಡಿದ್ದಾರೆ. ಅವರು ನಿಮ್ಮ ಬಗ್ಗೆ ಇವತ್ತು ಪ್ರೀತಿ ತೋರಿಸುತ್ತಿದ್ದಾರೆ. ನೀವು ಎಚ್ಚರಿಕೆಯಿಂದ ಇರಬೇಕು. ಇದೊಂದು ತರಹ ಧೃತರಾಷ್ಟ್ರನ ಅಪ್ಪುಗೆಯಾಗುತ್ತದೆ. ಇವತ್ತು ಇದ್ದಕ್ಕಿದ್ದ ಹಾಗೆ ಪ್ರೀತಿ ರಕ್ಷಣೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆಂದು ಜನ ಮಾತನಾಡುತ್ತಿದ್ದಾರೆ. ಈ ರಾಜ್ಯದ ಮುಖ್ಯ ಮಂತ್ರಿಗಳು ಗೃಹ ಮಂಡಳಿಯ ಅಧ್ಯಕ್ಷರಿಗೆ ರಕ್ಷಣೆ ಕೊಡುತ್ತಿದ್ದಾರೆ. ಎನ್ನುವ ಭಾವನೆ ಬರುತ್ತಿದೆ. ಅದಕ್ಕೋಸ್ಕರ ತಾವು ರಕ್ಷಣೆ ಕೊಡುವುದಕ್ಕೆ ಹೋಗಬೇಡಿ. ಹಿಂದಿನ ಸರ್ಕಾರ ಇದ್ದಾಗ ಏನು ಅವ್ಯವಹಾರ ನಡೆಯಿತು ಅದು ಕೇವಲ ಒಂದೆರಡು ರೂಪಾಯಿ ಅಲ್ಲ. ನಾನು ಹೇಳುತ್ತಿರುವುದು ಸಿಓಡಿ ವರದಿ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಯಾರೋ ಒಬ್ಬ ಕಂಟ್ರಾಕ್ಟರ್ ಎರಡು ಲಕ್ಷ ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ಇವತ್ತು ಗೃಹಮಂಡಳಿಯ ಎಲ್ಲ ವ್ಯವಹಾರಗಳ ಬಗ್ಗೆ ಕಾಗೋಡುತಿಮ್ಮಪ್ಪನವರು ಅಧ್ಯಕ್ಷರಾಗಿದ್ದಾಗಿನಿಂದಲೂ ಏನೇನು ನಡೆದಿದೆ ಎಲ್ಲ ವಿಷಯಗಳ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು. ನನ್ನ ಹತ್ತಿರ ಅನೇಕ ದಾಖಲೆಗಳು ಇವೆ. ನೂರಾರು ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ. ಕಡು ಬಡವರಿಗೆ ಮನೆ ಕೊಡುವುದು ಸೈಟು ಕೊಡುವುದು ನಿಧಾನವಾಯಿತು. ಕಾನೂನು ಬಾಹಿರವಾಗಿ ಕೊಟ್ಟಿರುವುದರಲ್ಲಿ ಅಧ್ಯಕ್ಷರ ಪಾತ್ರವಿದೆ. ಆದ್ದರಿಂದ ಮೊದಲು ಬಂಧನ ಮಾಡಬೇಕಾಗಿರುವುದು ಅಧಿಕಾರಿಗಳು ಮತ್ತು ಗೃಹಮಂಡಳಿಯ ಅಧ್ಯಕ್ಷರನ್ನು. ನಾನು ಕಾಗೋಡುತಿಮ್ಮಪ್ಪನವರ ಬಗ್ಗೆ ಮಾತನಾಡುತ್ತಿಲ್ಲ. ನನಗೆ ಅವರ ಬಗ್ಗೆ ಗೌರವವಿದೆ. ಆದರೆ ಅಧ್ಯಕ್ಷರಾಗಿ ಅವರೇನು ದುರ್ವ್ಯವಹಾರ ಮಾಡಿದ್ದಾರೆ ಇವತ್ತು ಬಡವರಿಗೆ ಅನ್ಯಾಯವಾಗುವ ಕೆಲಸ ಮಾಡಿದ್ದಾರೆ ಅಧಿಕಾರಿಗಳು ಶಾಮೀಲಾಗಿ ಕಂಟ್ರಾಕ್ಟರುಗಳ ಜೊತೆ ಶಾಮೀಲಾಗಿ ಹಗಲು ದರೋಡೆ ಮಾಡಿರುವುದನ್ನು ನಾನು ಸಹಿಸುವುದಕ್ಕೆ ಆಗುವುದಿಲ್ಲ. ಅದನ್ನೆಲ್ಲ ಸಹಿಸಿಕೊಂಡು ಇಲ್ಲಿ ಕುಳಿತುಕೊಳ್ಳುವುದಕ್ಕೆ ನಮಗೆ ಸಾಧ್ಯವಿಲ್ಲ. ಅದಕ್ಕೋಸ್ಕರ ಸಿಓಡಿ ಇಂಟೇರಿಯಂ ವರದಿಯನ್ನು ಟೇಬಲ್ ಮಾಡಬೇಕು. ಎಂಟೈರ್ ಗೃಹಮಂಡಳಿಯ ಎಲ್ಲ ವ್ಯವಹಾರಗಳ ಬಗ್ಗೆ

ಸಿಓಡಿ ತನಿಖೆಗೆ ಒಳಪಡಿಸಬೇಕು. ತಕ್ಷಣ ಗೃಹಮಂಡಳಿಯ ಮಾಜಿ ಅಧ್ಯಕ್ಷರಾದ ಕಾಗೋಡುತಿಮ್ಮಪ್ಪನವರನ್ನು ಬಂಧಿಸಬೇಕು ಇದು ನನ್ನ ಬೇಡಿಕೆಯಿದೆ.

ಶ್ರೀ ಕಾಗೋಡುತಿಮ್ಮಪ್ಪ :- ಅರಣ್ಯ ಲೂಟಿಯ ಬಗ್ಗೆ ತನಿಖೆ ಮಾಡಿಸಿ, ಇವರದು ಗೊತ್ತಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಕಾಗೋಡುತಿಮ್ಮಪ್ಪನವರು ಶಿವಮೊಗ್ಗ ಜಿಲ್ಲೆಯಲ್ಲಿ ಏನು ಅರಣ್ಯ ಲೂಟಿ ಮಾಡಿಸಿದ್ದಾರೆ ಅದರಬಗ್ಗೆ ತನಿಖೆ ಮಾಡಿಸಿ.

ಅಧ್ಯಕ್ಷರು :- ಮಾನ್ಯ ಯಡಿಯೂರಪ್ಪನವರೇ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಅವರು ಮಂತ್ರಿಗಳಾಗಿದ್ದಾಗ ಅರಣ್ಯ ಲೂಟಿ ಮಾಡಿಸಿರುವ ಬಗ್ಗೆ ತನಿಖೆ ಮಾಡಿಸಬೇಕಾಗುತ್ತದೆ. ಅವರು ಗೃಹಮಂಡಳಿಯ ಅಧ್ಯಕ್ಷರಾಗಿದ್ದಾಗ ಮುಖ್ಯಮಂತ್ರಿಗಳಂತೆ ವರ್ತನೆ ಮಾಡುತ್ತಿದ್ದರು. ಎಲ್ಲ ವ್ಯವಹಾರದಲ್ಲೂ ಪಾಲ್ಗೊಂಡಿದ್ದರು. ಇವತ್ತು ಬಂಗಾರಪ್ಪನವರನ್ನು ಅಡ್ಡದಾರಿಗೆ ಹಿಡಿಸುವುದಕ್ಕೆ ಇವರೇ ಮೂಲ ಕಾರಣ. ಈಗ ಅವರನ್ನು ಬಿಟ್ಟರು ನಿಮ್ಮನ್ನು ಅಪ್ಪಿಕೊಳ್ಳುತ್ತಿದ್ದಾರೆ. ನಾಳೆ ನಿಮ್ಮ ಗತಿ ಏನಾಗುತ್ತದೆ? ನೀವು ಯಾವುದೇ ಗತಿ ಆಗುವುದು ಬೇಡ. ನೀವು ಮುಖ್ಯಮಂತ್ರಿಗಳಾಗಿ ಮುಂದುವರಿಯಬೇಕು. ಅವರು ಶಾಸಕರಾದ ಮೇಲೆ ಮತ್ತು ಗೃಹಮಂಡಲಿಯ ಅಧ್ಯಕ್ಷರಾದ ಮೇಲೆ ಏನೇನು ಅವ್ಯವಹಾರಗಳು ನಡೆದಿವೆ ಎಂಟೈರ್ ಅವ್ಯವಹಾರಗಳನ್ನು ಅವರು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಇವತ್ತಿನವರೆಗೆ ನೂರಾರು ಕೋಟಿ ರೂಪಾಯಿ ವ್ಯವಹಾರ ನಡೆದಿದೆ. ನನ್ನ ಹತ್ತಿರ ದಾಖಲೆಗಳು ಇವೆ ಅವುಗಳನ್ನು ನಿಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಬೆಳಿಗ್ಗೆ ನಾವೊಂದು ವಿಚಾರ ಪ್ರಸ್ತಾಪ ಮಾಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ನೀವು ಸದನಕ್ಕೆ ಬರುವುದಿಲ್ಲ. ಕೌನ್ಸಿಲ್‌ನಲ್ಲಿದ್ದೆ ಎಂದು ಹೇಳುತ್ತೀರಿ. ಮಂತ್ರಿಗಳು ಇರುವುದಿಲ್ಲ ನೀವು ಇರುವುದಿಲ್ಲ.

Sri M. Veerappa Moily :- I am very sorry. Yor can check up with records. ನಾನು ಕೌನ್ಸಿಲ್‌ನಲ್ಲಿದ್ದೆ. Let records be straight.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಚೆಕ್ ಅಪ್ ಮಾಡತಕ್ಕದ್ದಲ್ಲ.

ಶ್ರೀ ವಾಟಾಳ್ ನಾಗರಾಜ್ :- ಇತ್ತೀಚಿನ ದಿನಗಳಲ್ಲಿ ಈ ಸದನದ ಬಗ್ಗೆ ನಿಮಗೆ ಅಷ್ಟು ಕಾಳಜಿ ಇಲ್ಲ. ಸಿಂಧ್ಯಾರವರು ಪ್ರಸ್ತಾಪ ಮಾಡಿದ್ದಾರೆ. ನಾನು ಪ್ರಸ್ತಾಪ ಮಾಡಬೇಕಾಗಿತ್ತು. ನಂಜುಂಡ ಲಾಕಪ್ ಸಾವಿನ ಬಗ್ಗೆ ಬೆಳಕು ಚೆಲ್ಲಬೇಕಾಗಿದೆ. ಒಬ್ಬ ಪೊಲೀಸ್ ಮ್ಯಾಜಿಸ್ಟ್ರೇಟರ್ ಮುಂದೆ ಹೇಳಿಕೆ ಕೊಟ್ಟಿದ್ದಾನೆ.

(2) ನಂಜುಂಡನ ಲಾಕ್ ಅಫ್ ಸಾವಿನ ಬಗ್ಗೆ

ಶ್ರೀ ಪಿ. ಜಿ. ಆರ್. ಸಿಂಧ್ಯ :- ನಮಗೆಲ್ಲರಿಗೂ ಅಧ್ಯಕ್ಷರು ಪರವಾನಗಿಯನ್ನು ಕೊಟ್ಟಿದ್ದಾರೆ ನಾವು ಮಾತನಾಡಿದ್ದೇವೆ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ್ ಮುಂದೆ ಹೋಗಿ ಸ್ಟೇಟ್‌ಮೆಂಟ್ ಮಾಡಿದ್ದಾನೆ. ನಾನು ಡ್ಯೂಟಿ ರಿಪೋರ್ಟ್ ಮಾಡಿಕೊಂಡಾಗ ಯಾರೂ ಅರೆಸ್ಟ್ ಆದದ್ದು ರಿಕಾರ್ಡ್‌ನಲ್ಲಿ ಇರಲಿಲ್ಲ. ಎಎಸ್‌ಐ ನನಗೆ ಸ್ವತಃ ಹೇಳಿದರು ಯಾರದೂ ಅರಸ್ಟ್ ಆಗಿಲ್ಲವೆಂದು ಆಮೇಲೆ ನೋಡಿದೆ ಒಂದು ಹೆಣದ ಹಾಗೆ ಇತ್ತು. ಅದನ್ನು ಆಟೋರಿಕ್ಷಾದಲ್ಲಿ ತೆಗೆದುಕೊಂಡು ಹೋಗಿ ಕೆಸಿಜಿ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ಮಾಡಿಸಿದೆವು. ಮತ್ತೆ ಅದನ್ನು ತೆಗೆದುಕೊಂಡು ಬಂದೆವು. ನನಗೆ ಮೇಲ್ಪಟ್ಟ ಅಧಿಕಾರಿಗಳ ಐಪಿಎಸ್ ಅಧಿಕಾರಿಗಳಿಂದ ತೊಂದರೆ ಇರುವುದರಿಂದ ನಾನು ನಿಮ್ಮ ಮುಂದೆ ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ. ಹಾಗೆಂದು ಹೇಳಿ ಬೆಳಿಗ್ಗೆ 8-15 ಗಂಟೆಗೆ ಮ್ಯಾಜಿಸ್ಟ್ರೇಟರ್ ಮುಂದೆ ಸ್ಟೇಟ್‌ಮೆಂಟ್